ವಿಷಯ : ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಗುರುತಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೮೭ (೧೦೬೫)

ಶ್ರೀ ಬಿ. ಎಚ್. ಬನ್ನಿಕೋಡ (ಹಿರೇಕೆರೂರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅನೇಕ ಲಂಬಾಣಿ ತಾಂಡಾಗಳನ್ನು ಹಾಗೂ ಇತರೆ ಚಿಕ್ಕ ಗ್ರಾಮಗಳನ್ನು ಕಂದಾಯ ಗ್ರಾಮಗಳೆಂದು ಕಾನೂನು ಪ್ರಕಾರ ಗುರುತಿಸದೇ ಇರುವುದು, ಇದರಿಂದಾಗಿ ಸದರೀ ಗ್ರಾಮಗಳ ಒಡಜನರು ಸರ್ಕಾರದ ಸೌಲಭ್ಯಗಳನ್ನು ಪಡೆಯುವಲ್ಲಿ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರೀ ಲಂಬಾಣಿ ತಾಂಡಾಗಳನ್ನು ಹಾಗೂ ಚಿಕ್ಕ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಕಾನೂನು ಪ್ರಕಾರ ಗುರುತಿಸಿ ಸರ್ಕಾರದ ಸೌಲಭ್ಯಗಳನ್ನು ದೊರಕಿಸಿಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಹೌದು

ಆ) ಗಣತಿ ಕಾರ್ಯ ಮುಗಿದ ನಂತರ ಈ ವಿಷಯವನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ವಿಷಯ :– ಬಗರ್ ಹುಕುಂ ಸಾಗುವಳಿ ಹುಲ್ಲುಗಾವಲು ಜಮೀನುಗಳನ್ನು ಮಾಡಿದವರಿಗೆ ಪಟ್ಟಾ ನೀಡುವದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೮೪ (೧೦೬೪)

ಶ್ರೀ ಬಿ. ಎಚ್. ಬನ್ನಿಕೋಡ್ (ಹಿರೇಕೆರೂರು) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ಜಾನುವಾರುಗಳಿಗೆ ಮೀಸಲಿಟ್ಟಿರುವ ಹುಲ್ಲುಗಾವಲು ಜಮೀನುಗಳನ್ನು ಬಗರ್ ಹುಕುಂ ಸಾಗುವಳಿ ಮಾಡಿದವರಿಗೆ ಪಟ್ಟಾ ಕೊಡಲು ಸರ್ಕಾರ ಯೋಚಿಸಿದೆಯೇ ?

೨. ಹಾಗಿದ್ದಲ್ಲಿ ಅರಣ್ಯ ಭೂಮಿ ಸಹ ಇಲ್ಲದ ಗ್ರಾಮಗಳ ಜಾನುವಾರುಗಳಿಗೆ ಹುಲ್ಲು ಗಾವಲು ಇಲ್ಲದೆಯೆ ವ್ಯವಸಾಯಕ್ಕೆ ಹಾಗೂ ಹೈನು ಅಭಿವೃದ್ಧಿಗೆ ತುಂಬಾ ತೊಂದರೆಯಾಗಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೩. ಹುಲ್ಲುಗಾವಲುಗಳನ್ನು ಸಾಗುವಳಿ ಮಾಡದಂತೆ ಹಾಗೂ ಬಗರ್ ಹುಕುಂ ಸಾಗುವಳಿ ಮಾಡಿದ್ದರೆ ಅಂತವರನ್ನು ಹೊರಗೆ ಹಾಕಲು ಸರ್ಕಾರ ತೆಗೆದುಕೊಳ್ಳುವ ಕ್ರಮವೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

೯. ಹೌದು.

೨. ಸಕ್ರಮಗೊಳಿಸುವ ಯೋಜನೆಯಿಂದ ಜಾನುವಾರುಗಳಿಗೆ ಮತ್ತು ಹೈನು ಅಭಿವೃದ್ಧಿಗೆ ತೊಂದರೆಯಾಗುವ ಪಕ್ಷದಲ್ಲಿ ಅಕ್ಕ ಪಕ್ಕದಲ್ಲಿರುವ ಅರಣ್ಯ ಜಮೀನಿನಲ್ಲಿ ಜಾನುವಾರುಗಳನ್ನು ಮೇಯಿಸಲು ಸರ್ಕಾರವು ಅನುವು ಮಾಡಿ ಕೊಡುತ್ತದೆ.

೩. ಸಕ್ರಮಗೊಳಿಸಲು ಉದ್ದೇಶಿಸಿರುವ ಮಿತಿಗಿಂತಲೂ ಅತಿಕ್ರಮಿಸಿರುವ ವಿಸ್ತೀರ್ಣವು ಮೀರಿದ್ದಲ್ಲಿ, ಅಂತಹ ಅತಿಕ್ರಮಣಗಳನ್ನು ಸಕ್ರಮಗೊಳಿಸ ಲಾಗುವುದಿಲ್ಲ. ಹಾಗೂ ಇನ್ನು ಮುಂದೆ ಗೋಮಾಳಗಳನ್ನು ಅತಿ ಕ್ರಮಿಸಿದ್ದಲ್ಲಿ, ಅಂತಹವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತದೆ

ವಿಷಯ :- ಕಲಾವಿದರಿಗೆ ಮಾಶಾಸನ ನಿಲ್ಲಿಸಿರುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೮೯ (೧೦೩೮)

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) :- ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಕಲಾವಿದರ ಸಂಖ್ಯೆ ಎಷ್ಟು ?

ಆ) ಕಲಾವಿದರಿಗೆ ನೀಡುತ್ತಿದ್ದ ಮಾಸಾಶನವನ್ನು ನಿಲ್ಲಿಸಿರುವುದರಿಂದ ಅವರಿಗೆ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಮಾಸಾಶನವನ್ನು ಮತ್ತೆ ನೀಡಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ ?

ಈ) ಹಾಗಿದ್ದಲ್ಲಿ ಇದರ ಬಗ್ಗೆ ಎಂದಿನಿಂದ ಕ್ರಮವನ್ನು ತೆಗೆದುಕೊಳ್ಳಲಾಗುವುದು ?

ಶ್ರೀ ಎಸ್. ರಮೇಶ್ (ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು) :.

ಅ) ಇಂತಹ ಮಾಹಿತಿ ಇರುವುದಿಲ್ಲ.

ಆ) ಇಲ್ಲ

ಇ) ಹಣಕಾಸಿನ ಪರಿಸ್ಥಿತಿ ಹಿನ್ನಲೆಯಲ್ಲಿ ಈ ವಿಷಯವನ್ನು ಸೂಕ್ತ ಸಮಯದಲ್ಲಿ ಪರಿಶೀಲಿಸಲಾಗುವುದು.

ವಿಷಯ : ಸರೋಜಿನಿ ಮಹಿಷಿ ವರದಿಯ ಜಾರಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೯೦ (೧೦೬೩)